ಕರ್ನಾಟಕ ವಿಧಾನ ಪರಿಷತ್ತು

ವಿಧಾನ ಪರಿಷತ್ತಿನ ಸದಸ್ಯರ ಹೆಸರು:	ಮಾನ್ಯ ಶ್ರೀ ಇಕ್ಬಾಲ್ ಅಹ್ಮದ್ ಸರಡಗಿ
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	732
ಉತ್ತರಿಸಬೇಕಾದ ದಿನಾಂಕ:	26.07.2019
ಉತ್ತರಿಸುವ ಸಚಿವರು:	ವಸತಿ ಸಚಿವರು

ಪ್ರಶ್ನೆ	ಉತ್ತರ
ಅ) "ಹೊಸ ಕೊಳಗೇರಿ ನೀತಿ ಯೋಜನೆ" ಯನ್ನು ಯಾವಾಗ ಜಾರಿಗೆ ತರಲಾಯಿತು; ಈ ಯೋಜನೆಯ ರೂಪುರೇಷೆಗಳೇನು; (ಸಂಪೂರ್ಣ ಮಾಹಿತಿ ನೀಡುವುದು)	ಕರ್ನಾಟಕ ಕೊಳಗೇರಿ ಪ್ರದೇಶಗಳ ಅಭಿವೃದ್ಧಿ ನೀತಿ-2016 ರನ್ನು ಸರ್ಕಾರವು ದಿನಾಂಕ: 17-06-2016 ರಂದು ಜಾರಿಗೆ ತಂದಿದೆ. **ನೀತಿಯ ಉದ್ದೇಶಗಳು:** • ಕೊಳಗೇರಿಗಳ ಸಮಗ್ರ ಅಭಿವೃದ್ಧಿಗಾಗಿ ಚೌಕಟ್ಟನ್ನು ಒದಗಿಸುವುದು. • ಮೂಲಭೂತ ಸೇವೆಗಳು ದೊರಕುವಂತೆ ಖಚಿತಪಡಿಸಿಕೊಳ್ಳುವುದು. • ಸಾಮಾಜಿಕ ಮೂಲಭೂತ ವ್ಯವಸ್ಥೆಗಳನ್ನು ಒದಗಿಸಲು ಇಲಾಖೆಗಳ ಸಮನ್ವಯವನ್ನು ಸಾಧ್ಯವಾಗಿಸುವುದು • ಕರ್ನಾಟಕ ಸರ್ಕಾರ ಹಾಗೂ ಭಾರತ ಸರ್ಕಾರದ ಯೋಜನೆಗಳನ್ನು ಒಮ್ಮುಖಗೊಳಿಸುವುದು.
ಆ) ಈ ಯೋಜನೆಯು ಜಾರಿಯಾದಾಗಿನಿಂದ ಇದುವರೆವಿಗೂ ಮೀಸಲಿಟ್ಟ ಅನುದಾನವೆಷ್ಟು; ಹಾಗೂ ಖರ್ಚು ಮಾಡಲಾದ ಅನುದಾನವೆಷ್ಟು; (ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು)	ಈ ಯೋಜನೆ ಜಾರಿ ಮಾಡಲು ಯಾವುದೇ ಅನುದಾನ ಮೀಸಲು ಇರುವುದಿಲ್ಲ..
ಇ) ಈ ಯೋಜನೆಯನ್ವಯ ರಾಜ್ಯದಲ್ಲಿ ಕೊಳಗೇರಿ ಪ್ರದೇಶಗಳ ಸಮೀಕ್ಷೆಯನ್ನು ನಡೆಸಲಾಗಿದೆಯೇ; ಹಾಗಿದ್ದಲ್ಲಿ, ಸಮೀಕ್ಷೆಯ ಪ್ರತಿ ನೀಡುವುದು;	ಕೊಳಗೇರಿ ಅಭಿವೃದ್ಧಿ ನೀತಿಯು ಜಾರಿಗೆ ಬಂದ ಮೇಲೆ ಕೊಳಚೆ ಪ್ರದೇಶಗಳ ಸಮಗ್ರ ಮಾಹಿತಿ ಸಂಗ್ರಹಿಸಲು ಕೊಳಚೆ ಪ್ರದೇಶಗಳಲ್ಲಿ ಬೇಡಿಕೆ ಸಮೀಕ್ಷೆಯನ್ನು ಕೈಗೊಳ್ಳಲಾಗಿದೆ. (ಸಮೀಕ್ಷೆಯ ಜಿಲ್ಲಾವಾರು ಪಟ್ಟಿಯನ್ನು ಅನುಬಂಧದಲ್ಲಿ ಒದಗಿಸಿದೆ.)
ಈ) ರಾಜ್ಯದ ತಾಲ್ಲೂಕು ಕೊಳಗೇರಿ ಪ್ರದೇಶಗಳವಾರು ಅನುದಾನದ ಹಂಚಿಕೆಯಲ್ಲಿ ತಾರತಮ್ಯವಾಗಿರು ವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಈ ತಾರತಮ್ಯವನ್ನು ಸರಿಪಡಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?(ಮಾಹಿತಿ ನೀಡುವುದು)	ಅನುದಾನವನ್ನು ಕೊಳಗೇರಿ ಪ್ರದೇಶಗಳ ಸ್ಥಳ ಪರಿಶೀಲನೆ ಮಾಡಿ ಅವಶ್ಯಕತೆಗನುಗುಣವಾಗಿ ಹಂಚಿಕೆ ಮಾಡಲಾಗುತ್ತಿದ್ದು, ಯಾವುದೇ ತಾರತಮ್ಯವಾಗಿರುವುದಿಲ್ಲ.

ಕಡತ ಸಂಖ್ಯೆ:ವಇ 31 ಕೊಮಂಇ 2019

(ವಿ.ಸೋಮಣ್ಣ)
ವಸತಿ ಸಚಿವರು